**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ,**
**ತಿಪಟೂರು**

**ಸಿ.ಸಿ. ನಂ. 788/2025** **ಪ್ರಾ.ಸಾ – 4**
**ಚಾ.ಸಾ – 4**

**ದಿನಾಂಕ: 13-05-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ನರಸಿಂಹಮೂರ್ತಿ |
| ತಂದೆಯ ಹೆಸರು | : | ಉಗ್ರಯ್ಯ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಕೃಷಿ |
| ವಾಸಸ್ಥಳ | : | ರಜತಾದ್ರಿಪುರ ಗ್ರಾಮ , |

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :-**

ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ನನಗೆ ಇದೆ ಅವರು ನನ್ನ ಸಂಬಂಧಿಕರು .

ಚಾಸಾ-1 ನನ್ನ ತಂಗಿ , ಚಾಸಾ-2 ನನ್ನ ತಮ್ಮ , ಚಾಸಾ-3 ನನ್ನ ತಮ್ಮನ ಹಂಡತಿ , ಚಾಸಾ-5 ನನ್ನ ತಮ್ಮ. ಚಾಸಾ- 6 ನನ್ನ ದೊಡ್ಡಪ್ಪನ ಮಗ , ಚಾಸಾ-7 ನನ್ನ ಪರಿಚಯಸ್ಥರು.

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ನಾನು ಯಾವುದೇ ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ನಾನು ಪೋಲಿಸರ ಮುಂದೆ ನನ್ನ ಹೇಳಿಕೆಯನ್ನು ನೀಡಿರುವುದಿಲ್ಲ.

ಸಾಕ್ಷಿಯು ಕಡತದಲ್ಲಿರುವ ಭಾವಚಿತ್ರದಲ್ಲಿನ ಆಟೋವನ್ನು ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ಪಾಟೀ ಸವಾಲು : ಮಾನ್ಯ ಸಹಾಯಕ ಅಭಿಯೋಜಕರಿಂದ :-**

ದಿನಾಂಕ 11-03-2025 ರಂದು ನಾನು ಚಾಸ—11 ರವರ ಸಮಕ್ಷಮ '' ದಿನಾಂಕ 07-

**CC. No. 788/2025**

**PW - 4**

03-2025 ನೇ -------------------------------- ಪ್ರಕರಣ ದಾಖಲಾಗಿರುತ್ತದೆ '' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ.7 ಎಂದು ಗುರುತಿಸಲಾಯಿತು.

ದಿನಾಂಕ 07-03-2025 ರಂದು ಬೆಳಗ್ಗೆ 8.10 ಗಂಟೆ ಸಮಯದಲ್ಲಿ 1ನೇ ಅರೋಪಿತನು ನಾವು ನಮ್ಮ ತೋಟದ ಮನೆಯಿಂದ KA 64- 4085 Baja Maxima Auto ದಲ್ಲಿ ಬರುವಾಗ ದಾರಿಯಲ್ಲಿ KA-44 EA -2200 ಬೈಕನ್ನು ಅಡ್ಡ ನಿಲ್ಲಿಸಿ ನಿಂತಿದ್ದು ಆಟೋ ನಿಲ್ಲಿಸಿ ಚಾಸಾ2 ರವರು ದಾರಿ ಬಿಡು ಎಂದು ಕೇಳಿದಾಗ 4ನೇ ಆರೋಪಿತನು ನಮ್ಮನ್ನು ಏಕಾಏಕಿ ಅವಾಚ್ಯ ಶಬ್ದಗಂದ ಬೈದು ಮನಬಂದಂತೆ ನಿಂದಿಸಿ ರೋಡ್ ಏನು ನಿಮ್ಮ ಅಪ್ಪನದ್ದಾ ಎಂದು ಕೊರಳ ಪಟ್ಟಿ ಹಿಡಿದು ಹೊಡೆದು ನಾನು ನಿನ್ನನ್ನು ಉಳಿಸುವುದಿಲ್ಲ ಎಂದು ಜೀವ ಬೆದರಿಕೆ ಹಾಕಿ ಹೊಡೆಯಲು ಮುಂದಾದಾಗ ನಾವು ಗಾಬರಿಯಾಗಿ ಸುಮ್ಮನೆ ಇರು ಎಂದು ಚೀರಾಡಿದೆವು. ಆಗ ಚಾಸಾ-1 ರವರನ್ನು ಹಿಡಿದು ಅವಾಚ್ಯ ಶಬ್ದಗಳಿಂದ ಬೈದು , ದನಗಳನ್ನು ಬಿಟ್ಟು ನಮ್ಮ ಹೊಲದಲ್ಲಿ ತೆಂಗಿನ ಸಸಿಯನ್ನು ಕಡಿಸಿದ್ದೀಯಾ ಎಂದು ನಮ್ಮಗಳ ಮೇಲೆ ದೌರ್ಜನ್ಯ ಎಸಗಿದನು ಎಂದರೆ ಸರಿಯಲ್ಲ. ಅಷ್ಟರಲ್ಲಿ ಆರೋಪಿತರು ಬಂದು ನಮ್ಮನ್ನು ಹೊಡೆದು ಮನ ಬಂದಂತೆ ನಿಂದಿಸಿರುತ್ತಾರೆಂದರೆ ಸರಿಯಲ್ಲ. ಚಾಸಾ-4 ರವರು ಇದನ್ನು ಪ್ರಶ್ನಿಸಲು ಬಂದಾಗ ಏಕಾಏಕಿ 2ನೇ ಆರೋಪಿತನು ಸೂಂಟಕ್ಕೆ ಕಾಲಿನಿಂದ ಒದ್ದು , ಇನ್ನುಳಿದ ಆರೂಪಿತರು ಸೇರಿ ನಮ್ಮನ್ನು ಉಳಿಸುವುದಿಲ್ಲ ಎಂದು ಜೀವ ಬೆದರಿಕೆ ಹಾಕಿ ಜೆಸಿಬಿ ಯಿಂದ ನಿಮ್ಮ ಮನೆಯನ್ನು ನಾಶ ಮಾಡುತ್ತೇವೆಂದು ಬೆದರಿಕೆ ಹಾಕಿರತ್ತಾರೆ ಎಂದರೆ ಸರಿಯಲ್ಲ. ನಾನು ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ರಾಜೀ ಮಾಡಿಕೊಂಡ ಕಾರಣ ಸುಳ್ಳು ಸಾಕ್ಷ್ಯ ನಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಏನೂ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು.**

**CC. No. 788/2025**

**PW - 4**

**CC. No. 788/2025**

**PW - 4**